**1 ನೇ ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆ 1646/2025**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

– ವಿರುದ್ಧ –

ಆರೋಪಿ/ಗಳು :

1. ನವೀನ ಬಿ.ಎನ್.
ತಂದೆ – ನಂಜು,
ವಯಸ್ಸು – 37 ವರ್ಷ,
ವಾಸಃ ಬನ್ನಿಕುಪ್ಪೆ ಕಸಬಾ ಹೋಬಳಿ,
ಹುಣಸೂರು ತಾಲ್ಲೂಕು.

2. ನಟರಾಜು ಬಿನ್ ನಂಜಪ್ಪ,
ವಯಸ್ಸು – 49 ವರ್ಷ,
ವಾಸಃ ಗಾವಡಗೆರೆ, ಹುಣಸೂರು ತಾಲ್ಲೂಕು.

## ಆಪಾದನೆ

ಶ್ರೀಮತಿ **ನಮ್ರತಾ ಎಸ್. ಹೊಸಮಠ, ಬಿ.ಎ., ಎಲ್.ಎಲ್.ಬಿ., 1** ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ

1. ದಿಃ 03.07.2025 ರಂದು ಸಂಜೆ 07.30 ಗಂಟೆ ಸಮಯದಲ್ಲಿ ಮೈಸೂರು ಜಿಲ್ಲೆ, ಬಿಳಿಕೆರೆ ಠಾಣಾ ಸರಹದ್ದು, ಬನ್ನಿಕುಪ್ಪೆ ಗ್ರಾಮದಲ್ಲಿರುವ ಹೆಚ್.ಪಿ.ಪೆಟ್ರೋಲ್ ಬಂಕ್ ಎದುರು ಬಂಟ್ವಾಳ–ಮೈಸೂರು ರಸ್ತೆಯಲ್ಲಿ ಹುಣಸೂರು ಕಡೆಗೆ ಚಾಸಾ.1 ರವರು ಅರಣ್ಯ ವಿಶ್ವವಿದ್ಯಾಲಯಕ್ಕೆ ಸೇರಿದ ಕೆಎ–12–ಬಿ–2618 ನಂಬರಿನ ಅಶೋಕ ಲೇಲ್ಯಾಂಡ್ ಸ್ಕೂಲ್ ಬಸ್

ನ್ನು ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ 1 ನೇ ಆರೋಪಿಯಾದ ನೀವು ಕೆಎ-45-3968 ನಂಬರಿನ ಫೋರ್ಸ್ ಟ್ರಮ್ಪ್ ಗೂಡ್ಸ್ ವಾಹನವನ್ನು ಯಾವುದೇ ಸೂಚನೆಯನ್ನು ನೀಡದೆ ಏಕಾಏಕಿ ಅಪರಾಧ ಮಾಡುವ ಉದ್ದೇಶದಿಂದ, ಅತೀವೇಗ ಮತ್ತು ಅಜಾಗರೂಕೆಯಿಂದ ಮಾನವನ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ರಸ್ತೆಯ ಬಲಭಾಗಕ್ಕೆ ಆದಂತೆ ಯೂಟರ್ನ್ ತೆಗೆದುಕೊಂಡ ಪರಿಣಾಮ ಎರಡು ವಾಹನಗಳ ನಡುವೆ ಅಪಘಾತವಾಗಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ **281** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೆಯದಾಗಿ ಅದೇ ದಿನಾಂಕ, ಅದೇ ಸಮಯ ಮತ್ತು ಸ್ಥಳದಂದು ಆರೋಪಿಯಾದ ನೀವು ಅಪರಾಧ ಎಸಗುವ ಉದ್ದೇಶದಿಂದ, ಅಪಘಾತ ಪಡಿಸಿದ ನಂತರ ನೀವು ಅಪಘಾತದ ಮಾಹಿತಿಯನ್ನು ಸ್ಥಳೀಯ ಪೋಲೀಸ್ ಠಾಣೆಗೆ ನೀಡದೇ ಮತ್ತು ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೇ ಸ್ಥಳದಿಂದ ಪರಾರಿ ಆಗಿರುತ್ತೀರೆಂದು, ಆ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ **187 ರ** ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, 1 ನೇ ಆರೋಪಿಗೆ ವಾಹನ ಪರವಾನಿಗೆ ಇಲ್ಲದೆ ಇದ್ದರು, ವಾಹನಕ್ಕೆ ವಿಮೆ ಇಲ್ಲದೆ ಇದ್ದರು ವಾಹನವನ್ನು ಚಾಲನೆ ಮಾಡಲು ನೀಡಿರುತ್ತೀರೆಂದು, ಆ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ **146** ರ ಸಹವಾಚಕ ಕಲಂ **196** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

**ಭಾರತೀಯ ನ್ಯಾಯ ಸಂಹಿತೆ ಕಲಂ 276 ರ ಅಡಿಯಲ್ಲಿ ಆರೋಪಿಯರ ಹೇಳಿಕೆ**

ಪ್ರಶ್ನೆ- 1) ನಿಮಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

ಪ್ರಶ್ನೆ- 2) ತಪ್ಪೊಪ್ಪಿಕೊಳ್ಳುವಿರೋ, ವಿಚಾರಣೆಯಾಗಬೇಕೊ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ನಮ್ರತಾ ಎಸ್. ಹೊಸಮಠ)**

ದಿನಾಂಕಃ **20.06.2026**

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.